ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹೊಸಬಾಳೆಯವರಾದ ಶ್ವೇತಾ ಹೊಸಬಾಳೆ ಸದ್ಯ ಬೆಂಗಳೂರು ನಿವಾಸಿ. ಪ್ರವಾಸ, ಫೋಟೊಗ್ರಫಿಯ ಗುಂಗಿನಲ್ಲಿದ್ದರೂ ಸಾಹಿತ್ಯ ಪ್ರೀತಿಯನ್ನು ಕಾಪಿಟ್ಟುಕೊಂಡವರು. ಅದಕ್ಕೆ ಪೂರಕ ಎಂಬಂತೆ ಕನ್ನಡ ಎಂ.ಎ. ಮತ್ತು ಪತ್ರಿಕೋದ್ಯಮ ಡಿಪ್ಲೊಮಾ ಓದಿದ್ದಾರೆ. ಕಥೆ, ಕವನ ಪ್ರಬಂಧಗಳನ್ನು ಬರೆದಿದ್ದಾರೆ. ಮಾಧ್ಯಮ ಕ್ಷೇತ್ರದಲ್ಲಿ ಕೆಲ ಕಾಲ ಕಾರ್ಯನಿರ್ವಹಿಸಿದ್ದಾರೆ. ಸಂಗೀತವೆಂದರೆ ಮತ್ತಷ್ಟು ಖುಷಿ.

ಅಲ್ಲ' ಎಂದು ಸಂಬಂಧದಿಂದ ಕಳಚಿಕೊಂಡು ಊರಿನ ಕಣ್ಣಲ್ಲಿ ದೊಡ್ಡ ಮನುಷ್ಯರಾದರು. ಇದಕ್ಕೆಲ್ಲಾ ಸಾಕ್ಷಿಯಾಗಿದ್ದ ಸೀತಾಲಕ್ಷ್ಮಿ ಕಲ್ಲಾಗಿ ಮೌನವನ್ನು ಆವಾಹಿಸಿಕೊಂಡಿದ್ದಳು. ಮಗ ಸೊಸೆ ಕಾಲಿಗೆ ಬಿದ್ದರೂ ಊರ ಜನರ ಮುಂದೆ ಕೈ ಎತ್ತಿ ಕಕ್ಕುಲಾತಿ ತೋರಿಸುವ ಸ್ಥಿತಿಯಲ್ಲಿ ಅವಳಿರಲಿಲ್ಲ. ಉಟ್ಟ ಬಟ್ಟೆಯಲ್ಲೇ ವಿಶ್ವನಾಥ ಮನೆ ಬಿಟ್ಟ.

ಎದೆಯುದ್ದ ಬೆಳೆದ ಮಗನ ಸಂಬಂಧವನ್ನೇ ಮರುಮಾತಿಲ್ಲದೇ ಚಿದಂಬರ ಭಟ್ಟರು ಕಡಿದುಕೊಂಡಿದ್ದರೂ ಅಂದಿನಿಂದ ಊರವರು ತಮ್ಮ ತಮ್ಮಲ್ಲೇ ಮಾತಾಡಿಕೊಂಡು ಚಿದಂಬರ ಭಟ್ಟರನ್ನೂ ಸೀತಾಲಕ್ಷ್ಮಿಯನ್ನೂ ದೂರವಿಟ್ಟರು. ಸದ್ಯ ಆವೇಶಕ್ಕೊಳಗಾಗಿ ಮಗನೇ ಅಲ್ಲ ಎಂದಿದ್ದರೂ ಸಿಟ್ಟು ಇಳಿದ ನಂತರ ಮಗನನ್ನು ಸೇರಿಸಿಕೊಳ್ಳಬಹುದು ಎನ್ನುವುದು ಅವರ ಗುಮಾನಿಯಾಗಿತ್ತು. ಸಂಕದಮನೆ ಶ್ಯಾಂ ಭಟ್ಟರು ಇವರ ಮನೆಯಿಂದ ತೆಗೆದುಕೊಳ್ತಿದ್ದ ಆಕಳ ಹಾಲನ್ನೂ ತಮಗೆ ಇನ್ನು ಮುಂದೆ ಬೇಡ ಎಂದು ಹೇಳಿದರು. ಮರುದಿನವೇ ಅಲ್ಲಿಯವರೆಗಾದ ಹಾಲಿನ ದುಡ್ಡನ್ನು ಲೆಕ್ಕಾಚಾರ ಮಾಡಿ ಆಳಿನ ಕೈಯ್ಯಲ್ಲಿ ಕಳುಹಿಸಿಕೊಟ್ಟರು. ಈ ಘಟನೆಯಾದ ಒಂದು ವಾರದ ನಂತರ ನಡೆದ ದೇವಸ್ಥಾನದ ವಾರ್ಷಿಕೋತ್ಸವಕ್ಕೆ ಚಿದಂಬರ ಭಟ್ಟರನ್ನೂ ಸೀತಾಲಕ್ಷ್ಮಿಯನ್ನೂ ಯಾರೂ ಕರೆಯಲಿಲ್ಲ. ಮಗ ಕೈ ಬಿಟ್ಟು ಹೋಗಿದ್ದ ಆಘಾತದಲ್ಲಿದ್ದ ಇವರಿಗೂ ಪರಮಾನ್ನ ಸವಿಯುವ ಮನಸ್ಸಿರಲಿಲ್ಲ; ಮನೆಯಲ್ಲಿಯೇ ಅನ್ನ ಗೊಜ್ಜು ಬೇಯಿಸಿ ತಿಂದಿದ್ದರು. ಸಮಾರಂಭದಲ್ಲಿ ಮಾತ್ರ ಎಲ್ಲರ ಬಾಯಲ್ಲೂ ಇದೇ ಸುದ್ದಿ! 'ಹೀಗಂತೆ...ಹಾಗಂತೆ...ಪಾಪ! ಸೀತಾಲಕ್ಷ್ಮಿ ಒಂದು ಮಾತನ್ನೂ ಆಡಲಿಲ್ಲವಂತೆ... ಇಷ್ಟು ದಿವಸ ದೂರದಲ್ಲಿ ನಡೆಯಿತು ಅಂಥ ಕೇಳಿದ್ವಿ, ಈಗ ನಮ್ಮೂರಲ್ಲೇ ಇಂಥದ್ದೊಂದು ಪ್ರಸಂಗ ನಡೆಯಿತು ನೋಡಿ, ಕಾಲ ಕೆಟ್ಟು ಹೋಗಿದೆ, ಈಗಿನ ಮಕ್ಕಳಿಗೆ ತಮ್ಮ ಜಾತಿ ತಮ್ಮ ಜನ ಅಂಥ ಅಭಿಮಾನವೇ ಇರೋಲ್ಲ ಬಿಡಿ, ಹುಷಾರಾಗಿರ್ರಿ' ಹೀಗೆ ತಲೆಗೊಂದು ಮಾತು ಅನುರಣಿಸುತ್ತಿತ್ತು. ಹೆಬ್ಬಯಲು ಚಿದಂಬರ ಭಟ್ಟರ ಮಗ ಎನ್ನುವುದಕ್ಕಿಂತ ಚಿದಂಬರ ಭಟ್ಟರ ಹೆಂಡತಿ ಸೀತಾಲಕ್ಷ್ಮಿಯ ಮಗ ವಿಶ್ವನಾಥ ಕೆಳಜಾತಿಯ ಹುಡುಗಿಯನ್ನು ಮದುವೆಯಾಗಿ ಮನೆಗೆ ಸೇರಿಸದೆ ಮನೆಬಿಟ್ಟು ಹೋದನಂತೆ ಎನ್ನುವ ಸುದ್ದಿ ಬ್ರೇಕಿಂಗ್ ನ್ಯೂಸ್ ಆಗಿ ಒಂದಾರು ತಿಂಗಳು ಊರಿನ ಸುತ್ತಮುತ್ತ ಹರಿದಾಡಿತು. ಜಾತಿ ಬಿಟ್ಟರೂ ಪರವಾಗಿಲ್ಲ, ಮದ್ವೆ ಆಯಿತಲ್ಲ ಅಂಥ ಸಮಾಧಾನ ಪಟ್ಟುಕೊಳ್ಳಬೇಕೋ ಅಥವಾ ಮದ್ವೆಯ ಕಾರಣದಿಂದ ಮನೆ ಬಿಡಬೇಕಾಗಿ ಬಂತಲ್ಲ ಅಂಥ ದುಃಖಪಡಬೇಕೋ? ಯಾವುದು ಹೆಚ್ಚು ಸುಖ ಎಂದು ವಿಶ್ವನಾಥನ ಪ್ರಸಂಗವನ್ನು ವಿಶ್ಲೇಷಿಸುತ್ತಾ ಇನ್ನೂ ಮದುವೆಯಾಗದ ತರುಣರು ಗೊಂದಲಗೊಂಡರು. ದುಗುಡ ಎದೆಯಲ್ಲಿದ್ದರೂ ದಿನಗಳು ಕಳೆದವು. ಆಗಿದ್ದಾಯ್ತು, ಮಾಡುವುದೇನು? ಹಣೆಬರಹ, ಬಂದದ್ದನ್ನು ಅನುಭವಿಸಬೇಕು ಎನ್ನುವ ಫಿಲಾಸಫಿಯನ್ನು ಅರೆದು ಕುಡಿದು ಚಿದಂಬರ ಭಟ್ಟರೂ, ಸೀತಾಲಕ್ಷ್ಮಿಯೂ ಮಾಮೂಲಿನ ಮನಸ್ಥಿತಿಗೆ ಮರಳಿದರು. ಚಿದಂಬರ ಭಟ್ಟರ ವಾರ ಹದಿನೈದು ದಿನಗಳ ಇಸ್ಪೀಟ್ ಮಂಡಲವೂ ಈ ಘಟನೆಯಾದಾಗಿನಿಂದ ನಿಂತು ಹೋಗಿತ್ತು. ಭಟ್ಟರಿಗೆ ಮತ್ತೆ ಇಸ್ಪೀಟ್ ಆಡುವ ಹುಮ್ಮಸ್ಸು ಬಂದು ನಾಲ್ಕಾರು ಜನರಿಗೆ ಫೋನಾಯಿಸಿದರು. 'ಈ ವಾರದಿಂದ ಮತ್ತೆ ಶುರು ಮಾಡುವ ಬನ್ನಿ' ಎಂದು ಕರೆದರು. ಕೆಲವರು ಸೌಜನ್ಯಕ್ಕೆ ಹೂಂ ಎಂದರೆ ಮತ್ತೆ ಕೆಲವರು ಏನೋ ಕೆಲಸದ ನೆಪ ಹೇಳಿ ಜಾರಿಕೊಂಡರು. ಚಿದಂಬರ ಭಟ್ಟರು ಶನಿವಾರ ಬಂದದ್ದೇ ಕಂಬಳಿ ಜಮಖಾನ ಹಾಸಿ ಇಸ್ಪೀಟ್ ಪಟ್ಟುಗಳನ್ನು ಹೊರತೆಗೆದು ಕಾದಿದ್ದೇ ಬಂತು, ಒಬ್ಬರೂ ಬರಲಿಲ್ಲ!